ಎಷ್ಟು ಬಗ್ಗಿ ನೋಡಿದರೂ ತಳ ಕಾಣದ ಭಯಂಕರ ಪ್ರಪಾತದ ಮೇಲೆ ಅಲುಗಾಡದೆ ನಿಂತಿರುವ ಹಿಮದರ್ಶನ ಬಾರು. ಒಂದು ಕಾಲದಲ್ಲಿ ಕೊಡಗಿನ ರಾಜರು ವೈರಿಗಳಿಗೆ ಮರಣ ಶಿಕ್ಷೆ ನೀಡುತ್ತಿದ್ದ ಪ್ರಪಾತ ಇಲ್ಲಿಂದಲೇ ಕಾಣಿಸುತ್ತದೆ.

ಈ ಹಿಮದರ್ಶನ ಬಾರೂ ಅದು ಇರುವ ಬೆಟ್ಟದ ತುದಿಯೂ ಅದರ ಸುತ್ತಲಿನ ಒಂದಿಷ್ಟು ಜಾಗವೂ ಚಾರುದತ್ತರಿಗೆ ಸೇರಿದ ಆಸ್ತಿ. ಅವರ ಪೂರ್ವಿಕರಿಗೆ ಕೊಡಗಿನ ರಾಜರು ಉಂಬಳಿಯಾಗಿ ನೀಡಿರುವ ಭೂಮಿ ಇದು. ಈ ಜಾಗದಲ್ಲಿ ಒಂದು ಪ್ರಕೃತಿ ಅಧ್ಯಾತ್ಮ ಕೇಂದ್ರವನ್ನು ಸ್ಥಾಪಿಸಬೇಕು ಎಂಬುದು ಚಾರುದತ್ತರ ಯೌವನದ ಕನಸಾಗಿತ್ತು. ಆದರೆ, ಅವರ ತಂದೆ ಗಣಪಯ್ಯನವರಿಗೆ ಇಲ್ಲೊಂದು ಹೋಟೆಲ್ಲು ಬೇಕಾಗಿತ್ತು.

ಈ ಹಿಮದರ್ಶನ ಎಂಬುದು ಒಂದು ಕಾಲದಲ್ಲಿ ಕೊಡಗಿನ ಪ್ರಖ್ಯಾತವಾದ ಸಸ್ಯಾಹಾರೀ ಹೋಟೆಲ್ಲಾಗಿತ್ತು. ಸ್ವತಃ ಗಣಪಯ್ಯನವರೇ ಅದರ ಗಲ್ಲಾದಲ್ಲಿ ಕೂರುತ್ತಿದ್ದರು. ಗಣಪಯ್ಯನವರ ಕಾಲ

